Sri D. PARAMESWARAPPA.—There are about 27 tanks which have no waste-weirs because there are natural waste-weirs and the Department has examined them ; and if it is possible to take them up, they will take them up.

Chamarajanagara-Satyamangala Railway Line

286. Sri D. M. SIDDAIAH (Biligere).—

Will the Minister for Public Works be pleased to state :—

(*a*) when was the proposal sent by the Government to the Central Government to take up the Chamarajanagar Satyamangala Railway Line ;

(*b*) the steps taken to urge upon the Centre to implement the same and why nothing has been done though the linking up the Satyamangala-Chamarajanagar line is all important in view of the development of trade and commerce ;

(*c*) instead of taking up the abovesaid railway line, is it a fact that there is a move to remove the line from Nanjangud to Chamarajanagar ;

(*d*) if so, what are the steps taken by the State Government to prevent such a move ?

Sri K. LAKKAPPA (Minister for Public Works).—

(*a*) 7th April, 1955.

(*b*) Government moved again the Central Government for taking up this Railway Line during 1965 and this will be given consideration in the IV Five Year Plan.

(*c*) No.

(*d*) Does not arise in view of reply to clause (*c*).

ಶ್ರೀ ಡಿ. ಎಂ. ಸಿದ್ದಯ್ಯ.—ಚಾಮರಾಜನಗರ—ಸತ್ಯಮಂಗಲ ರೈಲ್ವೆಗೆ 1955ರಲ್ಲಿ ಎಸ್ಟಿಮೇಟ್ ಆಯಿತು ಎಂದು ಹೇಳಿದ್ದೀರಿ. ಇದೇ ಸಮಯಕ್ಕೆ ಕೇಳಿದ ಹಾಸನ – ಮಂಗಳೂರು ರೈಲ್ವೆ ಶುರುವಾದರೂ, ಇದು ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು ?

† ಶ್ರೀ ಕೆ. ಲಕ್ಕಪ್ಪ.—ಈ ರೈಲ್ವೆ ರೈನು ಆಗಬೇಕು ಎನ್ನುವ ದೃಷ್ಟಿಯಿಂದ ಬಹಳ ಹಿಂದಿನಿಂದಲೂ ಎಂದರೆ 1891ನೇ ಇಸವಿಯಿಂದಲೂ ಕೇಳುತ್ತಿದ್ದಾರೆ. ಮನುಗಳನ್ನು ಸಲ್ಲಿಸುತ್ತಿದ್ದಾರೆ ಈ ಬಗ್ಗೆ ಸಾಕಷ್ಟು ಸರ್ವೆ ನಡೆದಿದೆ. 1896 ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1918ರಲ್ಲಿ ಸರ್ವೆ ನಡೆದಿದೆ. 1927ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1942ನೇ ಇಸವಿಯಲ್ಲಿ ಸರ್ವೆ ನಡೆದಿದೆ 1948ನೇ ಇಸವಿಯಲ್ಲಿ ಸರ್ವೆ ನಡೆದಿದೆ. ಹೀಗೆ ಅನೇಕ ಬಾರಿ ಸರ್ವೆ ನಡೆದಿದೆ. ಸರ್ಕಾರದವತಿಯಿಂದ ಕೂಡ ಪದೇ ಪದೇ ಕೇಂದ್ರ ಸರ್ಕಾರಕ್ಕೆ ಇದನ್ನು ಒತ್ತಾಯ ಹಾಕುತ್ತಿದ್ದಾರೆ. ತಮಗೆ ಉತ್ತರ ಕೊಟ್ಟಿರುವ ಹಾಗೆ 1955 ನೇ ಇಸವಿಯಲ್ಲಿ ಸರ್ಕಾರದವರು ಒತ್ತಾಯ ಮಾಡಿದ್ದಾರೆ. ಪುನಃ 1955 ನೇ ಇಸವಿಯಲ್ಲಿ ಸಹ ಹೆಚ್ಚಿನ ಒತ್ತಾಯ ಮಾಡಿ ಇದನ್ನು ಮಾಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಅವರು ನಾಲ್ಕನೆಯ ಪಂಚವಾರ್ಷಿಕಯೋಜನೆ ಫೈನಲ್ ಆಗುವ ಸನ್ನಿವೇಶದಲ್ಲಿ ಇದನ್ನು ಗಮನದಲ್ಲಿ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ ಹಾಗೆ 1891ನೇ ಇಸವಿಯಿಂದಲೂ ಇದನ್ನು ಪರಿಶೀಲಿಸುತ್ತಿದ್ದಾರೆ. ಅನೇಕಪೆಳೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇಷ್ಟಾದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವುದಕ್ಕೆ ಯೋಚನೆ ಮಾಡುತ್ತೀವೆ ಎಂದು ಹೇಳಿದರೆ ಇದೇನು ಮುಖ್ಯ ರೈಲ್ವೆ ಮಾರ್ಗವಲ್ಲವೇ, ಇದನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲವೇ, ಅಥವಾ ತಾವು ಒತ್ತಾಯ ಹಾಕಿದ್ದು ಪರಿಣಾಮಕಾರಿಯಾಗಿ ಆಗಿಲ್ಲವೇ ಹೇಗೆ, ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ಸರ್ಕಾರದವರು ಸಾಕಷ್ಟು ಒತ್ತಾಯವನ್ನು ಹಾಕುತ್ತಿದ್ದಾರೆ. ಅದರ ಜೊತೆಗೆ ವಿಧಾನಪರಿಷತ್ತಿನಲ್ಲಿ ಈ ಬಗ್ಗೆ ಒಂದು ಖಾಸಗಿ ನಿರ್ಣಯ ಕೂಡ ಬಂದು ಅದನ್ನು ಅವರು ಒಪ್ಪಿ ಸರ್ಕಾರದ ಮುಂದಿಟ್ಟಿದ್ದಾರೆ. ಮೊನ್ನೆ ಕೇಂದ್ರದ ರೈಲ್ವೆ ಖಾತೆಯ ಮಂತ್ರಿಗಳಾದ ಶ್ರೀಮಾನ್ ಪೂಣಚ್ಚ ಅವರು ಇಲ್ಲಿಗೆ ಬಂದಿದ್ದಾಗ್ಯೆ ಮುಖ್ಯ ಮಂತ್ರಿಗಳ ಚೇಂಬರಿನಲ್ಲಿ ಈ ಬಗ್ಗೆ ಡಿಸ್‌ಕಷನ್ ಮಾಡಿ ಒತ್ತಾಯ ಮಾಡಿದ್ದೇವೆ. ಇಷ್ಟೊಂದು ಒತ್ತಾಯ ಹಾಕಿದರೂ ಕೂಡ ಈ ರೈಲ್ವೆ ರೈನು ಕಾರ್ಯಗತವಾಗಿಲ್ಲ. ಇನ್ನೂ ನಾವೆಲ್ಲರೂ ಈ ಬಗ್ಗೆ ಹೆಚ್ಚಿನ ಒತ್ತಾಯ ಹಾಕಿದರೆ ಪ್ರಾಯಶಃ ಇದು ಜಾಗ್ರತೆಯಾಗಿ ಫಲಕಾರಿಯಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—1955ನೇ ಇಸವಿಯಿಂದ ಈಚೆಗೆ ಬೆಂಗಳೂರು-ಸೇಲಂ ರೈಲ್ವೆ ಮಾರ್ಗ ಆಗಿದೆ ಇದು ಮಾತ್ರ ಆಗಲಲ್ಲ. ಏತಕ್ಕೆ ಇದು ಆಗಲಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದವರ ಎಕ್ಸ್‌ಪ್ಲನೇಷನ್ ತಮ್ಮ ಮುಂದೆ ಇದೆಯೇ?

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದವರನ್ನು ನಾವು ಎಕ್ಸ್‌ಪ್ಲನೇಷನ್ ಕೇಳುವ ಸ್ಥಿತಿಯಲ್ಲಿ ಇಲ್ಲ. ಇದು ಆಗಬೇಕು ಎನ್ನತಕ್ಕಂಥ ಒತ್ತಾಯವನ್ನು ಹಾಕಿದರೂ ಸಹ ಕೇಂದ್ರ ಸರ್ಕಾರದವರು ಇದನ್ನು ತೆಗೆದುಕೊಂಡಿಲ್ಲ. ಮುಂದೆ ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇದರ ಪ್ರಾಮುಖ್ಯತೆ ಇದೆ, ಇದನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರದವರು ಇದುವರೆಗೂ ಆ ಕಡೆ ತಮ್ಮ ಗಮನವನ್ನು ಹರಿಸಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಆಳವಡಿಸುತ್ತಾರೆಯೇ ಹೇಗೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ತಾವು ಹೇಳುತ್ತಿದ್ದೀರಿ ಕೇಂದ್ರ ಸರ್ಕಾರದವರು ತಮ್ಮ ಕಡೆ ಗಮನ ಕೊಡುತ್ತಿಲ್ಲ ಎಂದು ಹಿಂದೆ ದಾಸಪ್ಪನವರು ರೈಲ್ವೆ ಖಾತೆಯ ಮಂತ್ರಿಗಳಾಗಿದ್ದರು. ಅವರು ನಮ್ಮ ರಾಜ್ಯದವರು. ಈಗ ಮೊನ್ನೆ ತಾನೆ ರೈಲ್ವೆ ಖಾತೆಯನ್ನು ಬಿಟ್ಟು ಕೊಟ್ಟವರು ಶ್ರೀಮಾನ್ ಪೂಣಚ್ಚ ಅವರು ನಮ್ಮ ರಾಜ್ಯದವರು. ಮುಂದೆ ಯಾರು ಬರುತ್ತಾರೆಯೋ ಕಾಣುವುದಿಲ್ಲ. ಈಗಾಗಲೇ ಮಹಾರಾಷ್ಟ್ರದಲ್ಲಿ, ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಬ್ರಾಡ್ ಗೇಜ್ ರೈಲ್ವೆ ರೈನುಗಳನ್ನು ಹಾಕುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ನಾವು ಕೇಳುವಂತಹ ಯಾವ ರೈಲ್ವೆ ರೈನೂ ಕೂಡ ನಮಗೆ ಬರಲಿಲ್ಲ. ಇದಕ್ಕೆ ಮುಖ್ಯ ಕಾರಣವೇನು ? ಮುಂದೆ ಬರುವಂಥವರ ಮೇಲೆ ಹೀಗೆ ಆಶೆಯನ್ನು ಇಟ್ಟು ಕೊಳ್ಳಬಹುದೇ ?

ಶ್ರೀ ಕೆ. ಲಕ್ಕಪ್ಪ.—ಮುಖ್ಯ ಕಾರಣ ಏನು ಎನ್ನತಕ್ಕಂಥಾದ್ದು ಗೊತ್ತಾಗುವುದಿಲ್ಲ. ಇನೂ ಯಾವ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒತ್ತಾಯವನ್ನು ಹಾಕುವ ಬಗ್ಗೆ ಏನಾದರೂ ಸಲಹೆಗಳನು ಕೊಟ್ಟರೆ ಆ ರೀತಿ ಮಾಡೋಣ.

ಶ್ರೀ ಕೆ. ಎಂ. ತಮ್ಮಯ್ಯ.—ಹಾಸನ ಮಂಗಳೂರು ರೈಲ್ವೆ, ಮತ್ತು ಕಡೂರು-ಮಂಗಳೂರು ರೈಲ್ವೆ ರೈನು ಹಾಕುವ ಬಗ್ಗೆ ನಮ್ಮ ಹತ್ತಿರ ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಈಗ ಅದನ್ನು ತಾತ್ಕಾರ ಮನೋಭಾವದಿಂದ ನೋಡುತ್ತಿದ್ದಾರೆ. ಇದನ್ನು ಹಾಗೆಯೇ ಅರ್ಧ ದಾರಿಯಲ್ಲೇ ಕೈಬಿಟ್ಟಿದ್ದಾರೆ. ಕಡೂರು-ಮಂಗಳೂರು ರೈನನ್ನು ನಕಲೇಶಪುರದ ಹತ್ತಿರ ಸೇರಿಸಬೇಕು ಎನ್ನುವ ಒಂದು ಪ್ರಪೋಜಲ್ ಇತ್ತು. ಇದನ್ನು ಶಿಫಾರಸ್ಸು ಮಾಡಿ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳುವ ಬಗ್ಗೆ ಸಹ 1965ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಹರಿಹರ-ಮೂಡಬಿದ್ರೆ-ಶಿವಮೊಗ್ಗ-ಭದ್ರಾವತಿ ಚಿಕ್ಕಮಗಳೂರು ಮಾರ್ಗವಾಗಿ ಒಂದು ರೈಲ್ವೆ ರೈನ್ ಹಾಕಬೇಕೆಂದು ನಮ್ಮ ಸರ್ಕಾರದವರು—ಕೇಂದ್ರ ಸರ್ಕಾರದವರನ್ನು ಕೇಳಿದ್ದಾರೆ.